ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

## ಎಸ್.ಸಿ ನಂ: **205/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜ ಎಸ್. | ಪ್ರಾಸಾ: 7 |
| ತಂದೆಯ ಹೆಸರು | : | ಶಿವಲಿಂಗಪ್ಪಾ | ಚಾಸಾ: 24 |
| ಪ್ರಾಯ | : | 51 ವರ್ಷ | ದಿನಾಂಕ 23.05.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ನಂಬರ 3 ಉಪವಿಭಾಗ, ಭದ್ರಾವತಿ | |
| ವಾಸಸ್ಥಳ | : | ಭದ್ರಾವತಿ. | |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು **2016-2017** ನೇ ಸಾಲಿನಿಂದ ದಿನಾಂಕ **14.07.2023** ರ ತನಕ ನಾನು ಲೋಕೋಪಯೋಗಿ ಇಲಾಖೆ ಸವದತ್ತಿ ಉಪವಿಭಾಗದಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

**2.** ಈ ಕೇಸಗೆ ಸಂಬಂಧಪಟ್ಟಂತೆ ದಿನಾಂಕ **22.08.2022** ರಂದು ನನ್ನ ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಕೇಸಗೆ ಸಂಬಂಧಪಟ್ಟಂತೆ ಕೊಲೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳದ ನಕ್ಷೆ ತಯಾರಿಸುವಂತೆ ಕೋರಿ ತನಿಖಾಧಿಕಾರಿಯವರು ನೀಡಿರುವ ಪತ್ರವನ್ನು ನೀಡಿರುತ್ತಾರೆ. ಅದರಂತೆ ನಾನು ದಿನಾಂಕ **25.08.2022** ರಂದು ಪೋಲಿಸ ಸಿಬ್ಬಂದಿಯವರಾದ ವೆಂಕಟೇಶ ಮೇಟಿ ಇವರ ಜೊತೆ ಕೃತ್ಯ ನಡೆದ ಸ್ಥಳ ಸವದತ್ತಿಯ ಅಯ್ಯಪ್ಪಸ್ವಾಮಿ ನಗರಕ್ಕೆ ಹೋಗಿ ಅಲ್ಲಿ ಈ ಮೇಲೆ ಹೇಳಿರುವ ಪೋಲಿಸರು ಸ್ಥಳ ತೋರಿಸಿದಂತೆ ನಾನು ಮನೆಯ ನಕ್ಷೆಯನ್ನು ತಯಾರಿಸಿ, ನಂತರ ದಿನಾಂಕ **26.08.2022** ರಂದು ತನಿಖಾಧಿಕಾರಿಯವರಿಗೆ ಕಳುಹಿಸಿಕೊಟ್ಟಿರುತ್ತೇನೆ. ಈ ತೋರಿಸಿದ ದಾಖಲೆಯು ನಮ್ಮ ಕಚೇರಿಯು ಸ್ವೀಕರಿಸಿದ ತನಿಖಾಧಿಕಾರಿಯವರು ನೀಡಿದ ಪತ್ರವಾಗಿದ್ದು, ಅದನ್ನು ನಿಪಿ-**27** ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆಯು ನಾನು ತಯಾರಿಸಿರುವ ಸ್ಥಳದ ನಕ್ಷೆಯಾಗಿರುತ್ತದೆ. ಅದನ್ನು ನಿಪಿ-**28** ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**28**(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆಯು ನಾನು ಸದರಿ ನಕ್ಷೆಯನ್ನು ತನಿಖಾಧಿಕಾರಿಯವರಿಗೆ ಕಚೇರಿಯ ಮೂಲಕ ಕಳುಹಿಸಿರುವ ಪತ್ರವಾಗಿರುತ್ತದೆ. ಸದರಿ ಪತ್ರಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸಹಿ ಮಾಡಿರುತ್ತಾರೆ. ಸದರಿ ಪತ್ರವನ್ನು ನಿಪಿ-**29** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರವಾಗಿಃ ಶ್ರೀ ಎಸ್ ಕೆ ಪಿ (ಡಿ ಎಲ್ ಎಸ್ ಎ) ವಕೀಲರಿಂದಃ</u>

(ಶ್ರೀ ಎಸ್ ಕೆ ಪಿ ವಕೀಲರು ಹಾಜರು ಇಲ್ಲ. ಆರೋಪಿ ಸಮಯಾವಕಾಶ ಕೋರುತ್ತಾರೆ. ಆದರೆ ಸಾಕ್ಷಿಯು ಸರ್ಕಾರಿ ಅಧಿಕಾರಿಯಾಗಿದ್ದು, ಸಮಯಾವಕಾಶ ನೀಡಲು ಯಾವುದೇ ಸಕಾರಣ ಇರುವುದಿಲ್ಲ. ಆದ್ದರಿಂದ ಆರೋಪಿಯ ಕೋರಿಕೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಎಸ್.ಸಿ ನಂ: **205/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗಿರಿಪ್ರಸಾದ್ ರೇವಡಿ | ಪ್ರಾಸಾ: 8 |
| ತಂದೆಯ ಹೆಸರು | : | ವೆಂಕಟೇಶಪ್ರಸಾದ | ಚಾಸಾ: 26 |
| ಪ್ರಾಯ | : | 48 ವರ್ಷ | ದಿನಾಂಕ 23.05.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪೋಟೋಗ್ರಾಫರ್ | |
| ವಾಸಸ್ಥಳ | : | ಆನೆಅಗಸಿ, ಸವದತ್ತಿ. | |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ಸವದತ್ತಿಯಲ್ಲಿ ಲಕ್ಷ್ಮೀ ಪೋಟೋಗ್ರಾಫರ್ ಎನ್ನುವ ಅಂಗಡಿ ಇಟ್ಟುಕೊಂಡು ಸುಮಾರು **20-25** ವರ್ಷಗಳಿಂದ ಪೋಟೋಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಮೊಬೈಲ್ ಮತ್ತು ಕ್ಯಾಮರಾದಲ್ಲಿ ಪೋಟೊ ತೆಗೆಯುವುದು ಮತ್ತು ಸದರಿ ಪೋಟೊಗಳನ್ನು ಕಂಪ್ಯೂಟರ ಮೂಲಕ ಪ್ರಿಂಟೆಡ್ ಮಾಡುವ ಜ್ಞಾನ ಇದೆ.

**2.** ದಿನಾಂಕ **18.08.2022** ರಂದು ನನ್ನನ್ನು ಸವದತ್ತಿ ಪೋಲಿಸರು ಸವದತ್ತಿ ಠಾಣೆಗೆ ಕರೆಸಿಕೊಂಡಿದ್ದರು. ಸದರಿ ಪೋಲಿಸ ಠಾಣೆಯಿಂದ ನನ್ನನ್ನು ಪೋಲಿಸರು ಅಯ್ಯಪ್ಪಸ್ವಾಮಿ ನಗರದಲ್ಲಿ ಕೊಲೆಯಾಗಿರುವ ಒಂದು ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಒಂದು ಹೆಣ್ಣು ಮಗಳ ಮೃತ ದೇಹ ಇದ್ದು, ಅಲ್ಲಿ ಪೋಟೊಗಳನ್ನು ನನ್ನ ಕಡೆಯಿಂದ ತೆಗೆಸಿರುತ್ತಾರೆ. ಆದಿನ ನಾನು ಸುಮಾರು ಎಂಟು ಪೋಟೊಗಳನ್ನು ತೆಗೆದಿರುತ್ತೇನೆ. ನಂತರ ಪೋಲಿಸ ಠಾಣೆಗೆ ಬಂದು ಅಲ್ಲಿಯೂ ಸಹ ಪೋಟೊಗಳನ್ನು ತೆಗೆದಿರುತ್ತೇನೆ.

**3.** ನಂತರ ದಿನಾಂಕ **19.08.2022** ರಂದು ಪೋಲಿಸ ಠಾಣೆಯಲ್ಲಿ ಕೆಲವು ಪೋಟೊಗಳನ್ನು ತೆಗೆದಿರುತ್ತೇನೆ. ಸದರಿ ಪೋಟೊಗಳನ್ನು ಈಗ ನಾನು ನೋಡಿದರೇ ಗುರುತಿಸಬಲ್ಲೆ. ಈಗ ತೋರಿಸಿದ ನಿಪಿ-**3** ರಿಂದ ನಿಪಿ-**6,** ನಿಪಿ-**8** ರಿಂದ ನಿಪಿ-**14** ಪೋಟೊಗಳು ಕೃತ್ಯ ನಡೆದ ಸ್ಥಳ ಮನೆಯಲ್ಲಿ ತೆಗೆದ ಪೋಟೊಗಳಾಗಿರುತ್ತವೆ. ಈಗ ತೋರಿಸಿದ ನಿಪಿ-**16,** ನಿಪಿ-**17,** ನಿಪಿ-**19** ರಿಂದ ನಿಪಿ-**23** ಪೋಟೊಗಳು ಅದೇ ದಿನ ಪೋಲಿಸ ಠಾಣೆಯಲ್ಲಿ ತೆಗೆದ ಪೋಟೊಗಳಾಗಿರುತ್ತವೆ. ಈಗ ತೋರಿಸಿದ ಎರಡು ಪೋಟೊಗಳು ದಿನಾಂಕ **19.08.2022** ರಂದು ನಾನು ಪೋಲಿಸ ಠಾಣೆಯಲ್ಲಿ ತೆಗೆದ ಪೋಟೊಗಳಾಗಿರುತ್ತವೆ. ಸದರಿ ಪೋಟೊಗಳನ್ನು ನಿಪಿ-**30** ಮತ್ತು ನಿಪಿ-**31** ಎಂದು ಗುರುತಿಸಲಾಯಿತು. ಸದರಿ ಪೋಟೊಗಳನ್ನು ನಾನು ನನ್ನ ವಿವೋ ಮೊಬೈಲನಲ್ಲಿ ತೆಗೆದಿರುತ್ತೇನೆ. ನಂತರ ಸದರಿ ಪೋಟೊಗಳನ್ನು ಕಂಪ್ಯೂಟರಗೆ ಅಳವಡಿಸಿ, ಅದರ ಸಿಡಿ ಮಾಡಿ ಕೊಟ್ಟಿರುತ್ತೇನೆ. ಸದರಿ ಪೋಟೊಗಳನ್ನು ಪ್ರಿಂಟ್ ಮಾಡಿ ಪೋಲಿಸರಿಗೆ ನೀಡಿರುತ್ತೇನೆ. ಈಗ ತೋರಿಸಿದ ಸಿಡಿ ಸದರಿ

ಸಿಡಿ ಆಗಿದ್ದು, ಅದನ್ನು ನಿಪಿ-32 ಎಂದು ಗುರುತಿಸಲಾಯಿತು. ಈ ಮೇಲೆ ಹೇಳಿದಂತೆ ನಾನು ಪೋಟೊಗಳನ್ನು ತೆಗೆದು, ನಾನು ಅವುಗಳನ್ನು ಕಂಪ್ಯೂಟರಗೆ ಅಳವಡಿಸಿ ಪ್ರಿಂಟ್ ಮಾಡಿ ಕೊಟ್ಟ ಬಗ್ಗೆ ಮತ್ತು ಸಿಡಿ ಮಾಡಿದ ಬಗ್ಗೆ ನಾನು ಪೋಲಿಸರಿಗೆ ಸಾಕ್ಷ್ಯ ಅಧಿನಿಯಮ ಕಲಂ 65-ಬಿ ಅಡಿಯಲ್ಲಿ ನಾನು ಪ್ರಮಾಣ ಪತ್ರ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಸದರಿ ಪ್ರಮಾಣ ಪತ್ರವಾಗಿದ್ದು, ಅದನ್ನು ನಿಪಿ-33 ಎಂದು ಗುರುತಿಸಲಾಯಿತು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರವಾಗಿಃ ಶ್ರೀ ಎಸ್ ಕೆ ಪಿ (ಡಿ ಎಲ್ ಎಸ್ ಎ) ವಕೀಲರಿಂದಃ

(ಶ್ರೀ ಎಸ್ ಕೆ ಪಿ ವಕೀಲರು ಹಾಜರು ಇಲ್ಲ. ಆರೋಪಿ ಸಮಯಾವಕಾಶ ಕೋರುತ್ತಾರೆ. ಆದರೆ ಸಮಯಾವಕಾಶ ನೀಡಲು ಯಾವುದೇ ಸಕಾರಣ ಇರುವುದಿಲ್ಲ. ಆದ್ದರಿಂದ ಆರೋಪಿಯ ಕೋರಿಕೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.